ಗುರುತತ್ತ್ವ

# ಗುರು ಎಂದರೆ ಯಾರು?

ಗುರುದಾಸ



ವ್ಯಾಸ ಮಹರ್ಷಿಗಳು, ಗಣೇಶ

## ಗುರುಪೂರ್ಣಿಮೆ

**ಗು**ರುಪೂರ್ಣಿಮೆಯ ಪಾವನ ದಿನದಂದು ಭಕ್ತರೆಲ್ಲರೂ ಗುರುವಿನ ಮೇಲೆ ನಿಷ್ಠೆಯಿಡುವ ಪ್ರತಿಜ್ಞೆಯನ್ನು ಕೈಗೊಳ್ಳುತ್ತಾರೆ. ಅಂದರೆ, ತಮಗಿಂತಲೂ ಗುರು ಮತ್ತು ಗುರುವಿನ ಸ್ಥಾನ ದೊಡ್ಡದು ಎಂದು ಕೊಂಡು, ಗುರುವಿನಲ್ಲಿ ತಮಗಿಂತಲೂ ಹೆಚ್ಚಿನ ಉತ್ತಮ ಗುಣಗಳಿವೆ ಎಂದು ಭಾವಿಸುತ್ತಾರೆ. ಈ ಸಂದರ್ಭದಲ್ಲಿ ಗುರುವಿಗೆ ಗೌರವದಿಂದ ಕಾಣಿಕೆ ಅರ್ಪಿಸುತ್ತಾರೆ, ಮರ್ಯಾದೆ ಸಲ್ಲಿಸುತ್ತಾರೆ.

ಗುರುಪೂರ್ಣಿಮೆಯನ್ನು **ವ್ಯಾಸಪೂರ್ಣಿಮೆ** ಎಂದೂ ಕರೆಯುತ್ತಾರೆ. ವ್ಯಾಸರು ಇದೇ ದಿನ ಅಂದರೆ ಆಷಾಢ ಮಾಸದ ಪೂರ್ಣಿಮೆಯ ದಿನ ಜನ್ಮ ತಾಳಿದರು. ದಕ್ಷಿಣಭಾರತದಲ್ಲಿ ಈ ಶುಭದಿನದ ಆಚರಣೆ ಅಷ್ಟೊಂದು ಇಲ್ಲದಿದ್ದರೂ ಸಹ, ಉತ್ತರ ಭಾರತದಲ್ಲಿ ಇದನ್ನು ವ್ಯಾಪಕವಾಗಿ ಆಚರಿಸುವ ಪದ್ಧತಿ ಇದೆ. ಈ ಆಧುನಿಕ ಕಾಲದಲ್ಲಿಯೂ ಗುರುಪೂರ್ಣಿಮೆಯ ಆಚರಣೆ ಭಾರತದಾದ್ಯಂತ ಕಂಡುಬರುತ್ತಿದೆ ಎನ್ನುವುದು ಗಮನಾರ್ಹವಾದ ವಿಷಯ.

ವ್ಯಾಸಮಹರ್ಷಿಗಳ ಜನ್ಮದಿನವನ್ನೇ ಗುರುಪೂರ್ಣಿಮೆ ಎಂದು ಪರಿಗಣಿಸಲು ಕಾರಣವೇನು? ಸಂಕ್ಷಿಪ್ತವಾಗಿ ಹೇಳುವುದಾದರೆ, ವ್ಯಾಸ ಮಹರ್ಷಿಗಳು ಕ್ಲಿಷ್ಟವಾದ ವೇದರಾಶಿಯನ್ನು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣಗಳೆಂದು ಸೂಕ್ತವಾದ ರೀತಿಯಲ್ಲಿ ವಿಂಗಡಿಸಿದ್ದಾರೆ; ವೇದಗಳಲ್ಲಿ ಹೇಳಿದ ತತ್ತ್ವಗಳನ್ನು ಸಾಮಾನ್ಯ ಜನರಿಗೆ ಅರ್ಥವಾಗುವಂತೆ, ಮಹಾಭಾರತದಲ್ಲಿ ವಿವರಿಸಿದ್ದಾರೆ; ಹದಿನೆಂಟು ಪುರಾಣಗಳನ್ನು ಸವಿಸ್ತಾರವಾಗಿ ರಚಿಸಿದ್ದಾರೆ. ಇದಲ್ಲದೆ ಬ್ರಹ್ಮಸೂತ್ರಗಳನ್ನು ಕ್ರಮಬದ್ಧವಾಗಿ ರಚಿಸಿ, ಉಪನಿಷತ್ತುಗಳ ಉನ್ನತ ಮಟ್ಟದ ವಿಚಾರಗಳನ್ನು ಅವುಗಳಲ್ಲಿ ವಿಶ್ಲೇಷಿಸಿದ್ದಾರೆ. ವ್ಯಾಸಮಹರ್ಷಿಗಳು ಕೈಗೊಂಡ ಈ ಬೃಹತ್ ಕಾರ್ಯವನ್ನು ನೋಡಿದಾಗ, ಒಬ್ಬ ಮನುಷ್ಯ ಇಷ್ಟೊಂದು ಬೌದ್ಧಿಕ ಕಾರ್ಯವನ್ನು ಮಾಡಲು ಸಾಧ್ಯವೇ ಎಂಬ ಸೋಜಿಗ ನಮ್ಮಲ್ಲಿ ಮೂಡುತ್ತದೆ. ಹೀಗಾಗಿ, ಅವರನ್ನು ಭಾರತೀಯ ಸಂಪ್ರದಾಯವು ಶ್ರೇಷ್ಠ ಗುರು ಎಂದು ಪರಿಗಣಿಸಿದೆ. ಅದರಿಂದಲೇ, ವ್ಯಾಸಪೂರ್ಣಿಮೆಯನ್ನು ಗುರುಪೂರ್ಣಿಮೆ ಎಂದು ಆಚರಿಸುತ್ತೇವೆ.

## ಗುರು ಎಂದರೆ ಯಾರು?

ಗುರುಗೀತೆಯಲ್ಲಿ 'ಗುರು' ಶಬ್ದವನ್ನು ಹೀಗೆ ವಿವರಿಸಿದ್ದಾರೆ:

**ಗುಕಾರೋಽಂಧಕಾರಸ್ತು ರುಕಾರಸ್ತನ್ನಿವರ್ತಕಃ ।**
**ಅಂಧಕಾರನಿವರ್ತ್ಯಾ ತು ಗುರುರಿತ್ಯಭಿಧೀಯತೇ ॥**

" 'ಗು' ಎಂದರೆ ಅಂಧಕಾರ; 'ರು' ಎಂದರೆ ಆ ಕತ್ತಲೆಯನ್ನು ಹೋಗಲಾಡಿಸುವವನು. ಯಾರು ಅಂಧಕಾರವನ್ನು ಅಂದರೆ ಅಜ್ಞಾನವನ್ನು ಹೋಗಲಾಡಿಸುತ್ತಾನೋ ಆತನೇ ಗುರು."

ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಹೀಗೆ ಹೇಳಿದೆ:

**ಸ ಗುರುರ್ಯಃ ಕ್ರಿಯಾಃ ಕೃತ್ವಾ ವೇದಮಸ್ಮೈ ಪ್ರಯಚ್ಛತಿ ।**
**ಉಪನೀಯ ದದದ್ ವೇದಮಾಚಾರ್ಯಃ ಸ ಉದಾಹೃತಃ ॥**

**ಏಕದೇಶಮುಪಾಧ್ಯಾಯ ಋತ್ವಿಗ್ ಯಜ್ಞಕೃದುಚ್ಯತೇ ।**
**ಏತೇ ಮಾನ್ಯಾ ಯಥಾಪೂರ್ವಮೇಭ್ಯೋ ಮಾತಾ ಗರೀಯಸೀ ॥**

"ಯಾರು ಶಾಸ್ತ್ರವನ್ನು ಗರ್ಭಧಾರಣೆಯ ಕಾಲದಿಂದ ಹಿಡಿದು, ಉಪನಯನದ ಕಾಲದವರೆಗೆ ಉಪದೇಶಿಸುತ್ತಾನೆಯೋ ಆತನೇ **ಗುರು**ವೆಂದು ಕರೆಯಲ್ಪಡುತ್ತಾನೆ. ಯಾರು ಶಾಸ್ತ್ರವನ್ನು ಉಪನಯನದ ನಂತರ ಹೇಳಿಕೊಡುತ್ತಾನೆಯೋ ಆತನಿಗೆ **ಆಚಾರ್ಯ**ನೆಂದು ಕರೆಯುತ್ತಾರೆ. ಯಾರು ಶಾಸ್ತ್ರದ ಒಂದು ಅಂಶವನ್ನು ಮಾತ್ರ ಹೇಳಿಕೊಡುತ್ತಾನೆಯೋ ಆತನಿಗೆ **ಉಪಾಧ್ಯಾಯ** ಎಂದು ಹೆಸರು. ಯಾರು ಯಜ್ಞಯಾಗಾದಿಗಳಲ್ಲಿ ಸಹಾಯವನ್ನು ನೀಡುತ್ತಾನೆಯೋ ಆತನಿಗೆ **ಋತ್ವಿಕ್** ಎಂದು ಹೇಳುತ್ತಾರೆ (ಇವರೆಲ್ಲರ ಮಧ್ಯೆ **ಗುರು**ವಿನ ಸ್ಥಾನವು ಬಹಳ ಉಚ್ಚತಮವಾದುದು. ಆದಾದನಂತರ **ಆಚಾರ್ಯ, ಉಪಾಧ್ಯಾಯ** ಮತ್ತು ಕಡೆಯದಾಗಿ **ಋತ್ವಿಕನ** ಸ್ಥಾನ ಬರುತ್ತದೆ). ಇವರೆಲ್ಲರಿಗೂ ಕ್ರಮಬದ್ಧವಾಗಿ ಗೌರವವನ್ನು ಸಲ್ಲಿಸಬೇಕು. ಆದರೆ ಇವರೆಲ್ಲರಿಗಿಂತಲೂ **ತಾಯಿಗೆ** ಅಗ್ರಸ್ಥಾನವನ್ನು ನೀಡಬೇಕು" (ಏಕೆಂದರೆ ಮಗು ಮೊಟ್ಟಮೊದಲ ಬಾರಿಗೆ ತಾಯಿಯಿಂದಲೇ ಎಲ್ಲವನ್ನೂ ಕಲಿಯುತ್ತದೆ).

ತಂತ್ರಶಾಸ್ತ್ರದಲ್ಲಿ ನಿಷ್ಣಾತನಾಗಿದ್ದು, ಯಾರು ತನ್ನ ಶಿಷ್ಯನನ್ನು ತಂತ್ರ ಶಾಸ್ತ್ರದ ಪದ್ಧತಿಯಂತೆ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಸಿಕೊಂಡು ಹೋಗುತ್ತಾನೆಯೋ, ಅದರಂತೆಯೇ ಉಪದೇಶಗಳನ್ನು ಮತ್ತು ಮಂತ್ರದೀಕ್ಷೆಯನ್ನು ಶಿಷ್ಯನಿಗೆ ದಯಪಾಲಿಸುತ್ತಾನೆಯೋ ಅವನಿಗೆ **ತಾಂತ್ರಿಕ ಗುರು**ವೆಂದು ಹೆಸರು. ಅದೇ ರೀತಿ ಪುರಾಣಗಳಲ್ಲಿ ಹೇಳಿದಂತೆ ಯಾರು ದೀಕ್ಷೆಯನ್ನು ನೀಡುತ್ತಾನೆಯೋ ಅವನನ್ನು **ಪೌರಾಣಿಕ ಗುರು**ವೆಂದು

**ಗುರು ಮಧ್ಯಸ್ಥಗಾರ. ಅವನು ಮದುವೆ ಮಾಡುವವನು ಗಂಡು ಹೆಣ್ಣನ್ನು ಒಟ್ಟಿಗೆ ತರುವಂತೆ, ದೇವರು ಮತ್ತು ಮಾನವನನ್ನು ಸಮೀಪಕ್ಕೆ ತರುವನು... ಗುರು ದೊಡ್ಡ ಗಂಗಾನದಿಯಂತೆ. ಮನುಷ್ಯರು ಕಸವನ್ನೆಲ್ಲಾ ಗಂಗಾನದಿಗೆ ಎಸೆಯುವರು. ಆದರೆ ಇದರಿಂದ ಅದರ ಪಾವನತೆ ಕಡಮೆಯಾಗುವುದಿಲ್ಲ. ಇದರಂತೆಯೇ ಗುರು ಎಲ್ಲಾ ವಿಧವಾದ ನೀಚ ಅಪಮಾನ ಮತ್ತು ನಿಂದೆಗಳಿಂದ ಮೇಲಿರುವನು. –ಶ್ರೀರಾಮಕೃಷ್ಣ**

ಕರೆಯುತ್ತಾರೆ. ಕಾಲಕಳೆದಂತೆಲ್ಲಾ ಈ ತಾಂತ್ರಿಕ ಗುರುಗಳು ಮತ್ತು ಪೌರಾಣಿಕ ಗುರುಗಳು ತಮ್ಮದೇ ಆದ ಗುರುಪರಂಪರೆಗಳನ್ನು ಸ್ಥಾಪಿಸಿಕೊಂಡರು. ಹೀಗೆ ಅನೇಕ ಗುರುಪೀಠಗಳು, ಸಂಪ್ರದಾಯಗಳು ತಲೆಯೆತ್ತಿದವು.

ಮಂತ್ರದೀಕ್ಷೆ ಎನ್ನುವುದು ನಮ್ಮ ಆಧ್ಯಾತ್ಮ ಜೀವನಕ್ಕೆ ಸಂಬಂಧಪಟ್ಟಿದ್ದು. ಗುರುವಿಗೆ ಯೋಗ್ಯತೆ ಇಲ್ಲದೆ ಹೋದಲ್ಲಿ ಶಿಷ್ಯನ ಆಧ್ಯಾತ್ಮ ಜೀವನಕ್ಕೆ ಧಕ್ಕೆ ಒದಗಬಹುದು.

### ಗುರುವಿನ ವಿಶಿಷ್ಟ ಲಕ್ಷಣಗಳು

ಗುರುಸ್ತೋತ್ರವು ಹೀಗೆ ಹೇಳುತ್ತದೆ:

**ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥**

"ಅಜ್ಞಾನವೆಂಬ ಕತ್ತಲೆಯಿಂದ ಕುರುಡಾಗಿರುವ ಕಣ್ಣುಗಳನ್ನು ಜ್ಞಾನವೆಂಬ ಅಂಜನದಿಂದ ಯಾರು ತೆರೆಯುತ್ತಾನೆಯೋ, ಅಂತಹ ಗುರುವಿಗೆ ನಮಸ್ಕಾರ."[೩]

ಶ್ರೀರಾಮಕೃಷ್ಣರು ಹೇಳುತ್ತಾರೆ: "ನಾಗರಹಾವು ವಿಷಜಂತುಗಳಲ್ಲೆಲ್ಲಾ ಅತ್ಯಂತ ಕ್ರೂರವಾದುದು. ಅದು ಒಂದು ಕಪ್ಪೆಯನ್ನು ಹಿಡಿದ ತಕ್ಷಣವೇ ಕೊಂದುಹಾಕುತ್ತದೆ. ಕಪ್ಪೆ ಒಂದೆರಡು ಸಲ ಒದ್ದಾಡಬಹುದು, ಅಷ್ಟೆ. ಆದರೆ ಕೆಲವೇ ನಿಮಿಷಗಳಲ್ಲಿ ಅದರ ಗತಿ ಮುಗಿದುಹೋಗುತ್ತದೆ. ಅದೇ ಕಪ್ಪೆಯನ್ನು ಒಂದು ವೇಳೆ ನೀರುಹಾವು ಹಿಡಿಯಿತು ಎಂದುಕೊಳ್ಳಿ, ಆಗ ಆ ಕಪ್ಪೆ ಟರ್, ಟರ್ ಎಂದು ಕೂಗುತ್ತಾ ಇರುತ್ತದೆ. ಹಾವಿಗೋ, ಆ ಕಪ್ಪೆಯನ್ನು ನುಂಗಲೂ ಆಗುವುದಿಲ್ಲ, ಬಿಡಲೂ ಇಷ್ಟವಿಲ್ಲ." ಈ ದೃಷ್ಟಾಂತವನ್ನು ಹೇಳುತ್ತ ಅವರು ನಾಗರಹಾವನ್ನು ಶ್ರೇಷ್ಠ ಆಧ್ಯಾತ್ಮಿಕ ಗುರುವಿಗೂ, ಸಾಧಾರಣ ಗುರುವನ್ನು ನೀರುಹಾವಿಗೂ ಹೋಲಿಸುತ್ತಾರೆ. ಒಳ್ಳೆಯ ಗುರುವೊಬ್ಬನು ತನ್ನ ಶಿಷ್ಯನನ್ನು ಭಗವಂತನ ಮಾರ್ಗದಲ್ಲಿ ನಡೆಸಲು ಯಾವ ತರಹದ ಕಷ್ಟವನ್ನೂ ಪಡುವುದಿಲ್ಲ. ಅದೇ ರೀತಿ, ಅಂತಹ ಗುರುವಿನ ಮಾರ್ಗದರ್ಶನವನ್ನು ಪಡೆಯುವ ಶಿಷ್ಯನೂ ಕೂಡ ಯಾವ ತರಹದ ತೊಂದರೆಯೂ ಇಲ್ಲದೆ, ತನ್ನ ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿಯುತ್ತಾನೆ. ಇಬ್ಬರೂ ತಮ್ಮ ತಮ್ಮ ಪಾತ್ರವನ್ನು ಅತ್ಯಂತ ಕುಶಲತೆಯಿಂದ ಸೊಗಸಾಗಿ ನಿರ್ವಹಿಸುತ್ತಾರೆ. ತಕ್ಕ ಯೋಗ್ಯತೆ ಇಲ್ಲದ ಕಾರಣ ಸಾಧಾರಣ ಗುರುವಿನ ಉಪದೇಶಗಳು ಫಲಕಾರಿಯಾಗುವುದಿಲ್ಲ. ಏಕೆಂದರೆ, ಯಾವ ಗುರುತರವಾದ ಜವಾಬ್ದಾರಿಯನ್ನು ಅವನು ಹೊತ್ತುಕೊಂಡಿದ್ದಾನೆಯೋ ಅದಕ್ಕೆ ಅವನು ಅಸಮರ್ಥನಾಗಿರುತ್ತಾನೆ. ಆದ್ದರಿಂದ, ಆತನಿಗೆ ಮತ್ತು ಆತನ ಶಿಷ್ಯರಿಗೆ – ಇಬ್ಬರಿಗೂ ಕಷ್ಟ ತಪ್ಪಿದ್ದಲ್ಲ. ಆಧ್ಯಾತ್ಮಿಕ ಮಾರ್ಗವು ಅತ್ಯಂತ ಕಠಿಣ ಮಾರ್ಗ, ಸೂಕ್ಷ್ಮವಾದ ಮಾರ್ಗ. ಅಸಮರ್ಥನಾದ ಗುರುವು ಅಂತಹ ಮಾರ್ಗದಲ್ಲಿ ಶಿಷ್ಯನನ್ನು ಕರೆದುಕೊಂಡುಹೋಗಲು ಪ್ರಯತ್ನಿಸುವುದು ಒಬ್ಬ ಕುರುಡ ಇನ್ನೊಬ್ಬ ಕುರುಡನನ್ನು ನಡೆಸಿಕೊಂಡು ಹೋದಂತೆ ಆಗುತ್ತದೆ. ಕೊನೆಗೆ ಇಬ್ಬರೂ ಯಾವ ಗುರಿಯನ್ನೂ ಮುಟ್ಟಲಾರರು.

ನಮ್ಮ ದೈನಂದಿನ ಜೀವನದಲ್ಲಿ ಹೇಗೆ ಪ್ರತಿಯೊಂದು ಕಾರ್ಯದಲ್ಲಿಯೂ ಒಬ್ಬ ಅನುಭವಿ ವ್ಯಕ್ತಿಯ ಸಹಾಯ ಬೇಕಾಗುತ್ತದೆಯೋ, ಅದೇ ರೀತಿ ಆಧ್ಯಾತ್ಮಿಕ ಜೀವನದಲ್ಲಿಯೂ ಕೂಡ ಓರ್ವ ಮಾರ್ಗದರ್ಶಿ ಬೇಕೇ ಬೇಕು. ಆ ಅನುಭವಿ ಮಾರ್ಗದರ್ಶಿಗೆ 'ಗುರು' ಎಂದು ಹೆಸರು. ಯಾವ ವಿಷಯವನ್ನು ನಾವು ಕಲಿಯಲು ಆಶಿಸುತ್ತೇವೆಯೋ ಆ ವಿಷಯದಲ್ಲಿ ನಿಷ್ಣಾತನಾದ ಗುರುವನ್ನು ನಾವು ಆಯ್ಕೆ ಮಾಡಿಕೊಳ್ಳಬೇಕು. ಉದಾಹರಣೆಗೆ, ನಾವು ಭಕ್ತಿಮಾರ್ಗದಲ್ಲಿ ಹೋಗಬೇಕಾದರೆ ನಿಷ್ಠಾವಂತ ಭಕ್ತನನ್ನೇ ಗುರುವಾಗಿ ಸ್ವೀಕರಿಸಬೇಕು. ಒಂದು ವೇಳೆ ವೇದಾಂತಪ್ರತಿಪಾದ್ಯವಾದ ಬ್ರಹ್ಮಜ್ಞಾನವನ್ನು ಪಡೆಯಬೇಕೆಂದು ನಿಶ್ಚಯ ಮಾಡಿದಲ್ಲಿ ಓರ್ವ ಬ್ರಹ್ಮಜ್ಞಾನಿಯನ್ನೇ ಆರಿಸಿಕೊಳ್ಳಬೇಕು. ಮುಂಡಕೋಪನಿಷತ್ತಿನಲ್ಲಿ ಹೀಗೆ ಹೇಳಿದೆ:

**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ।**
**ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ ॥**

"ಶಿಷ್ಯನು ಬ್ರಹ್ಮಜ್ಞಾನವನ್ನು ಪಡೆಯಲು ಸಮಿತ್ತನ್ನು ಹಿಡಿದುಕೊಂಡು ಗುರುವಿನ ಬಳಿಯೇ ಹೋಗಬೇಕು. ಅಂತಹ ಗುರುವು ಶ್ರೋತ್ರಿಯನೂ, ಬ್ರಹ್ಮನಿಷ್ಠನೂ ಆಗಿರಬೇಕು."[೪]

ಗುರು ಹೇಗಿರಬೇಕು? ಅವನು ಶಾಸ್ತ್ರದಲ್ಲಿ ನುರಿತವನಾಗಿರಬೇಕು ಮತ್ತು ಬ್ರಹ್ಮಜ್ಞಾನಿಯಾಗಿರಬೇಕು. ಅಂಥ ಬ್ರಹ್ಮಜ್ಞಾನಿಯನ್ನು ಶಿಷ್ಯನು ಹುಡುಕಿಕೊಂಡು ಹೋಗಬೇಕು. ಶಿಷ್ಯ ಗುರುವಿನ ಬಳಿಗೆ ಹೇಗೆ ಹೋಗಬೇಕು? ಬಹಳ ನಮ್ರ ಭಾವನೆಯಿಂದ, ನಿರಹಂಕಾರಿಯಾಗಿ ಗುರುವಿನ ಬಳಿಸಾರಬೇಕು.

ಯಾರು ಪ್ರಪಂಚ ಜೀವನದಲ್ಲಿ ಬೆಂದು ಬಳಲಿ ಬೆಂಡಾಗಿ ದುಃಖತಪ್ತರಾಗಿರುತ್ತಾರೋ ಅಂಥವರು ಬ್ರಹ್ಮಸಾಕ್ಷಾತ್ಕಾರವನ್ನು ಮಾಡಿಕೊಂಡ ಗುರುಗಳ ಹತ್ತಿರ ಹೋಗಬೇಕು. ಅವರನ್ನು ದುಃಖದಿಂದ ಪಾರುಮಾಡುವ ಉಪಾಯವನ್ನು ಉಪದೇಶಿಸಿರೆಂದು ಪ್ರಾರ್ಥಿಸಬೇಕು. ಶಿಷ್ಯನು ಗುರುವನ್ನು ಹೇಗೆ ಪ್ರಾರ್ಥಿಸಬೇಕು ಎನ್ನುವುದನ್ನು ವಿವೇಕಚೂಡಾಮಣಿಯಲ್ಲಿ ಸವಿಸ್ತಾರವಾಗಿ ಹೀಗೆ ಹೇಳಿದೆ:

**ಕಥಂ ತರೇಯಂ ಭವಸಿಂಧುಮೇತಂ**
**ಕಾ ವಾ ಗತಿರ್ಮೇ ಕತಮೋಽಸ್ತ್ಯುಪಾಯಃ ।**
**ಜಾನೇ ನ ಕಿಂಚಿತ್ ಕೃಪಯಾವ ಮಾಂ ಭೋಃ**
**ಸಂಸಾರದುಃಖಕ್ಷತಿಮಾತನುಷ್ವ ॥**

"ಈ ಸಂಸಾರ ಸಾಗರವನ್ನು ಹೇಗೆ ದಾಟಬಲ್ಲೆನು? ನನಗೆ ಗತಿ ಯಾವುದು? ನನಗೆ ಮೋಕ್ಷೋಪಾಯವು ಯಾವುದು? ಇದಾವುದನ್ನೂ ನಾನು ಅರಿಯೆನು. ಹೇ ಪ್ರಭೋ, ಕೃಪೆಯಿಟ್ಟು ನನ್ನನ್ನು ಕಾಪಾಡು. ನನ್ನ ಸಂಸಾರದುಃಖವನ್ನು ಪೂರ್ಣವಾಗಿ ನಾಶಮಾಡು."[೫]

ಹೀಗೆ ಶಿಷ್ಯನಾದವನು ಕಳಕಳಿಯಿಂದ ಶ್ರದ್ಧಾಪೂರ್ವಕವಾಗಿ ಗುರುವನ್ನು ಪ್ರಾರ್ಥಿಸಬೇಕು.

### ಶಿಷ್ಯನ ಲಕ್ಷಣಗಳು

ಗುರುವಿಗೆ ಹೇಗೆ ವಿಶಿಷ್ಟ ಲಕ್ಷಣಗಳು ಇವೆಯೋ ಅದರಂತೆಯೇ ಶಿಷ್ಯನಿಗೂ ಕೂಡ ಕೆಲವು ಲಕ್ಷಣಗಳಿವೆ. ಯಾವ ಶಿಷ್ಯನು ಉಪದೇಶ ಮತ್ತು ಸಲಹೆಗಳನ್ನು ಬ್ರಹ್ಮನಿಷ್ಠ ಗುರುವಿನಿಂದ ಬಯಸುತ್ತಾನೆಯೋ ಆತನೂ ಸ್ವತಃ ಸಮರ್ಥನಾಗಿರಬೇಕು. ಅಂತಹ ಶಿಷ್ಯನ ವಿಷಯದಲ್ಲಿ ಮಾತ್ರ ಸದ್ಗುರುವು ಕೊಟ್ಟ ಉಪದೇಶಗಳು ಫಲಕಾರಿಯಾಗುತ್ತವೆ. **ಪವಿತ್ರತೆ, ಗುರುವಿನಲ್ಲಿ ಪೂಜ್ಯ ಭಾವನೆ ಮತ್ತು ಗುರುವಾಕ್ಯದಲ್ಲಿ ಅಪಾರವಾದ ಶ್ರದ್ಧೆ – ಇವುಗಳು ಶಿಷ್ಯನಲ್ಲಿರಬೇಕಾದ ಕೆಲವು ಮುಖ್ಯ ಲಕ್ಷಣಗಳು.** ವಿವೇಕ ಚೂಡಾಮಣಿ ಹೀಗೆ ಹೇಳುತ್ತದೆ:

ದುರ್ಲಭಂ ತ್ರಯಮೇವೈತದ್ ದೈವಾನುಗ್ರಹಹೇತುಕಂ ।
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥

**"ಈ ಮೂರಕ್ಕೆ ಭಗವಂತನ ಅನುಗ್ರಹವೇ ಕಾರಣವಾಗುತ್ತದೆ. ಅವು ಕಷ್ಟಸಾಧ್ಯವೇ ಸರಿ. ಅವು ಯಾವುವು ಎಂದರೆ, ಮನುಷ್ಯ ಜನ್ಮ, ಮೋಕ್ಷವನ್ನು ಪಡೆಯಬೇಕೆಂಬ ತೀವ್ರ ಇಚ್ಛೆ ಮತ್ತು ಮಹಾತ್ಮರ ಸಂಗ."**[೬]

ಶಾಸ್ತ್ರಗಳ ಪ್ರಕಾರ ಅನೇಕ ಜನ್ಮಗಳು ಕಳೆದ ಮೇಲೆ ಮನುಷ್ಯ ಜನ್ಮ ಬರುತ್ತದೆ. ಅದು ದುಸ್ಸಾಧ್ಯವಾದುದು. ಮನುಷ್ಯ ಜನ್ಮ ಬಂದರೂ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂಬ ಹಂಬಲ ಬರುವುದು ಇನ್ನೂ ಕಠಿಣವಾದದ್ದು. ಎಲ್ಲರೂ ಸತ್ಯಕ್ಕಾಗಿ ಶ್ರಮಪಡುತ್ತಾರೆ ಎಂದು ಹೇಳಲಾಗುವುದಿಲ್ಲ. ಸಾಮಾನ್ಯವಾಗಿ ಜನರು ಮುಕ್ತಿಗಾಗಿ ಆಶಿಸುವುದಿಲ್ಲ. ಒಂದು ವೇಳೆ ಒಬ್ಬ ಮುಕ್ತಿಗಾಗಿ ಹಂಬಲಿಸುತ್ತಿದ್ದಾನೆ ಎಂದರೆ, ಆತ ಇತರರಿಗಿಂತ ಹೆಚ್ಚು ಉತ್ತಮ ಶ್ರೇಣಿಯವನು ಎಂದರ್ಥ. ಮನುಷ್ಯತ್ವ ಮತ್ತು ಮುಮುಕ್ಷುತ್ವ ಎರಡೂ ಇದ್ದರೂ ಅದು ಸಾರ್ಥಕವಾಗಲು ಮಹಾಪುರುಷರ ಸಂಗ ಬೇಕಲ್ಲವೇ? ಮಹಾತ್ಮರೇ ಮುಕ್ತಿಪಥಕ್ಕೆ ಮಾರ್ಗದರ್ಶಿಗಳು. ಅಂಥವರಿಗೇ "ಗುರು" ಎಂದು ಕರೆಯುವುದು.

ಗುರುಗಳ ಆಶ್ರಯವೆಂದರೆ, ಕೇವಲ ಅವರ ಸಾನ್ನಿಧ್ಯದಲ್ಲಿ ವಾಸ ಮಾಡುವುದು ಎಂದರ್ಥವಲ್ಲ. ಗುರುಗಳ ಹತ್ತಿರವಿದ್ದು, ಅವರು ಹೇಳಿಕೊಟ್ಟ ಉಪದೇಶಗಳನ್ನು, ವಿಚಾರಗಳನ್ನು ಅರ್ಥಮಾಡಿಕೊಳ್ಳುವಂಥ, ಕಾರ್ಯರೂಪಕ್ಕೆ ತರುವಂಥ ಶಕ್ತಿ ಶಿಷ್ಯನಿಗೆ ಬೇಕು. ಗುರೂಪದೇಶದಲ್ಲಿ ಕೇಳುವ ಉದಾತ್ತ ವಿಚಾರಗಳನ್ನು ಕರಗತ ಮಾಡಿಕೊಳ್ಳಬೇಕು. ಇಂಥ ಸಾಮರ್ಥ್ಯವಿಲ್ಲದೆ ಹೋದರೆ, ಶಿಷ್ಯನಲ್ಲಿ ಯಾವ ರೀತಿಯ ಪರಿವರ್ತನೆಯೂ ಕಂಡುಬರುವುದಿಲ್ಲ. ಗುರುವಿನ ಸಾನ್ನಿಧ್ಯದಲ್ಲಿ ವಾಸಿಸುವುದರಿಂದ ಮತ್ತು ಗುರುವಿನ ಉಪದೇಶಗಳನ್ನು ಕೇಳುವುದರಿಂದ ಶಿಷ್ಯನ ವ್ಯಕ್ತಿತ್ವದಲ್ಲಿ ಆಮೂಲಾಗ್ರ ಪರಿವರ್ತನೆ ಉಂಟಾಗಬೇಕು. ಇದು ಬಹಳ ಮುಖ್ಯ. ಸುಮ್ಮನೆ ಗುರುವಿನ ಹತ್ತಿರ ಇದ್ದರೆ, ಯಾವ ಬದಲಾವಣೆಯೂ ಆಗದೆ ಇರಬಹುದು. ಗುರುವಿನ ಸಂಗವು ಶಿಷ್ಯನಲ್ಲಿ, ಪ್ರಾಮಾಣಿಕವಾಗಿ ಗುರುವಿನ ಶ್ರೀಮುಖದಿಂದ ಬರುವ ಉಪದೇಶಗಳನ್ನು ಶ್ರವಣ ಮಾಡಿ, ಅವನ್ನು ಮಾನಸಿಕವಾಗಿ ಸ್ವೀಕರಿಸಿ ಸಾಕ್ಷಾತ್ಕಾರ ಮಾಡಿಕೊಳ್ಳುವ ಉತ್ಸುಕತೆಯನ್ನು ಮೂಡಿಸಬೇಕು. ಅದಕ್ಕಾಗಿ ಶಿಷ್ಯನಿಗೆ ನಾಲ್ಕು ಗುಣಗಳು ಇರಬೇಕು:

> ನಾವು ನಮ್ಮ ಗುರುವನ್ನು ಸಾಧಾರಣ ಮನುಷ್ಯನೆಂದು ಭಾವಿಸಬಾರದು. ಶಿಷ್ಯನು ಇಷ್ಟದೇವತೆಯನ್ನು ಕಾಣುವುದಕ್ಕೆ ಮುಂಚೆ ಗುರುವೇ ಪರಿಣಾಮಹೊಂದಿ, ದೇವರಂತೆ ತೋರುವನು. ಆಗ ಶಿಷ್ಯನಿಗೆ ಗುರು ಮತ್ತು ಇಷ್ಟದೇವತೆ ಒಂದಾಗಿ ಕಾಣುವುದು. ಗುರು ಶಿಷ್ಯನನ್ನು ನಿರ್ವಾಣದ ಪರಮಪದದವರೆಗೂ ಕರೆದೊಯ್ಯುವನು. ಶಿಷ್ಯ ಏನು ಪ್ರಾರ್ಥಿಸಿದರೂ ಗುರು ಅದನ್ನು ಕರುಣಿಸುವನು. –ಶ್ರೀರಾಮಕೃಷ್ಣ

೧. ನಿತ್ಯಾನಿತ್ಯವಸ್ತು ವಿವೇಕ, ೨. ಇಹಾಮುತ್ರಫಲಭೋಗ–ವಿರಾಗ ೩. ಶಮಾದಿ ಷಟ್ಕಸಂಪತ್ತಿ, ೪. ಮುಮುಕ್ಷುತ್ವ.

**ವಿವೇಕ**ವೆಂದರೆ, ನಿತ್ಯವಸ್ತು ಯಾವುದು, ಅನಿತ್ಯವಸ್ತು ಯಾವುದು? ಎಂಬುದನ್ನು ಬಿಡಿಸಿ ನೋಡುವ ಅರಿವು. ವಿರಾಗವೆಂದರೆ, ಈ ಪ್ರಪಂಚದಲ್ಲಿ ಮತ್ತು ಸ್ವರ್ಗಾದಿಗಳಲ್ಲಿ ಕಂಡುಬರುವ ಎಲ್ಲಾ ತರಹದ ಭೋಗಾನುಭವಗಳ ವಿಷಯದಲ್ಲಿ **ವೈರಾಗ್ಯ** ಅಥವಾ ಜಿಗುಪ್ಸೆ. ಮೂರನೆಯದಾಗಿ, ಸಾಧಕನಾದವನು ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧಾ, ಸಮಾಧಾನ ಎಂಬ **ಆರು ಗುಣಸಂಪತ್ತು**ಗಳಿಂದ ಕೂಡಿದವನಾಗಿರಬೇಕು. ಅದಲ್ಲದೆ ಮೋಕ್ಷವನ್ನು ಪಡೆದುಕೊಳ್ಳಲೇಬೇಕು ಎನ್ನುವ ತುಡಿತ ಕೂಡ ಇರಬೇಕು. ಈ ಲಕ್ಷಣಗಳು ಇದ್ದಲ್ಲಿ ಅಂತಹವನು ಜ್ಞಾನಕ್ಕೆ ಅಧಿಕಾರಿ ಅಥವಾ ಅರ್ಹನಾದ ವ್ಯಕ್ತಿ ಎಂದು ಹೇಳಬಹುದು. ಅಂತಹ ಶಿಷ್ಯನು ಗುರೂಪದೇಶವನ್ನು ಪಡೆಯಲು ಅರ್ಹನಾದವನು ಎಂದು ಶ್ರೀಶಂಕರಾಚಾರ್ಯರು ಹೇಳುತ್ತಾರೆ. ಅಂತಹ ಶಿಷ್ಯನ ಗುಣಗಳನ್ನು ಅವರು ಈ ಕೆಳಗಿನ ಶ್ಲೋಕದಲ್ಲಿ ಸುಂದರವಾಗಿ ನಿರೂಪಿಸುತ್ತಾರೆ:

ಪ್ರಶಾಂತಚಿತ್ತಾಯ ಜಿತೇಂದ್ರಿಯಾಯ ಚ
ಪ್ರಹೀಣದೋಷಾಯ ಯಥೋಕ್ತಕಾರಿಣೇ ।
ಗುಣಾನ್ವಿತಾಯಾನುಗತಾಯ ಸರ್ವದಾ
ಪ್ರದೇಯಮೇತತ್ ಸತತಂ ಮುಮುಕ್ಷವೇ ॥

"ಯಾವನು ಪ್ರಶಾಂತಚಿತ್ತನಾಗಿದ್ದಾನೋ, ಮನಸ್ಸನ್ನು ನಿಗ್ರಹಗೊಳಿಸಿದ್ದಾನೋ, ಯಾವನಿಗೆ ಕೋಪತಾಪಗಳಿಲ್ಲವೋ ಮತ್ತು ಕಾಮೋದ್ರೇಕವಿಲ್ಲವೋ, ಯಾವನು ಏಕಾಗ್ರಚಿತ್ತನಾಗಿದ್ದಾನೋ ಅಂತಹ ಶಿಷ್ಯನಿಗೆ ಗುರುವು ಬ್ರಹ್ಮಜ್ಞಾನವನ್ನು ಉಪದೇಶಿಸಬೇಕು."[೭]

ಹೀಗೆ ವಿಶಿಷ್ಟವಾದ ಗುರು ಮತ್ತು ಅರ್ಹನಾದ ಶಿಷ್ಯ ಇಬ್ಬರೂ ಜ್ಞಾನದ ಪ್ರಕಾಶನಕ್ಕೆ ಕಾರಣರಾಗುತ್ತಾರೆ. ಆದ್ದರಿಂದಲೇ **'ಆಚಾರ್ಯವಾನ್ ಪುರುಷೋ ವೇದ'** – ಆಚಾರ್ಯ ಅಥವಾ ಗುರುವಿನ ಮೂಲಕವೇ ವಿದ್ಯೆಯನ್ನು ಕಲಿಯಬೇಕು ಎಂದು ಛಾಂದೋಗ್ಯ ಉಪನಿಷತ್ತು ವಿಧಿಸುತ್ತದೆ.

ಆಕರಗಳು: ೧. ಗುರುಸ್ತೋತ್ರ, ೨. ಯಾಜ್ಞವಲ್ಕ್ಯ ಸ್ಮೃತಿ, ೧:೩೩,೩೪
೩. ಗುರುಸ್ತೋತ್ರ, ೩ ; ೪. ಮುಂಡಕೋಪನಿಷತ್ತು, ೧:೨:೧೨
೫. ವಿವೇಕಚೂಡಾಮಣಿ, ೪೦ ; ೬. ವಿವೇಕಚೂಡಾಮಣಿ, ೩
೭. ಉಪದೇಶಸಾಹಸ್ರೀ, ಪಾರ್ಥಿವ ಪ್ರಕರಣ, ೭೨